ಮುಖ್ಯೋಪಾಧ್ಯಾಯರಾದ ಸಾಂತಪ್ಪ ಮಾಸ್ಟ್ರು ಮಾತ್ರ ಇರುವ ಹೊತ್ತಿನಲ್ಲಿ ಸಾಂತಪ್ಪ ಮಾಸ್ಟ್ರು 'ನೀವು ಶಾಲೆ ಬಿಟ್ಟ ಕೂಡಲೇ ಹಾಗೆ ಯಾಕೆ ಓಡುವುದು ಟೀಚರಮ್ಮ? ನನಗೆ ಸ್ವಲ್ಪ ಸಹಾಯ ಮಾಡಿದರೆ ನಿಮ್ಮ ಗಂಟೇನು ಹೋಗುತ್ತದೆ?' ಎಂದದ್ದಕ್ಕೆ ಸಿಸಿಲಾ ಟೀಚರ್ ಆಗ 'ಇಲ್ಲ' ಎನ್ನಲಿಲ್ಲ. ಹೀಗೆ ಟೀಚರಮ್ಮನ ನೆರವು ಮುಂದುವರಿದಾಗ ಸಾಂತಪ್ಪ ಮಾಸ್ಟ್ರು ಒಮ್ಮೆ ಬೇಕಂತಲೇ 'ನಿಮ್ಮಲ್ಲಿ ಇನ್ನೂ ಯೌವನ ಇದೆಯಲ್ಲ ಟೀಚರಮ್ಮ, ನಿಮಗೆ ಮರುಮದುವೆ ಆಗಬೇಕು ಎಂದು ಒಮ್ಮೆಯೂ ಅನಿಸಲೇ ಇಲ್ಲವೆ?' ಎಂದು ಪ್ರಶ್ನಿಸಿದ್ದಲ್ಲದೆ ಆ ಮಾತನ್ನು ಆಡುವಾಗ ಅವರ ಕಣ್ಣುಗಳಲ್ಲಿ ಇದ್ದ ಕಾಮದ ಕ್ರೌರ್ಯ ನೋಡಿ ಆಕೆ ಬೆದರಿದರೂ 'ಅದೆಲ್ಲ ನಿಮಗೆ ಏಕೆ?' ಎಂದು ಗಟ್ಟಿಯಾಗಿಯೇ ಪ್ರಶ್ನಿಸಿ 'ಸಾರಿ ಸರ್ ನಾಳೆಯಿಂದ ನಾನು ಶಾಲೆಬಿಟ್ಟ ಮೇಲೆ ನಿಮ್ಮ ಜೊತೆ ಇರುವುದಿಲ್ಲ' ಎಂದಿದ್ದರು. ಅದು ಊರಲ್ಲಿ ಯಾರಿಗೆ ಗೊತ್ತಾಗದಿದ್ದರೂ ಸಿಸಿಲಾ ಟೀಚರಮ್ಮನಿಗೆ ಇದನ್ನು ಸೇವಂತಿ ಅಕ್ಕನಲ್ಲಿ ಹೇಳಬೇಕೆನಿಸಿತ್ತು. ಅದನ್ನು ಆಕೆ ಹೇಳಿದಾಗ

